ಮಾಡಿಸಿಕೊಂಡಿದ್ದರೆ, ಅಥವಾ ರೂಟ್ ಕೆನಾಲ್ ಥೆರಪಿ ಮಾಡಿಸಿಕೊಂಡು ಹಲ್ಲುಗಳಿಗೆ ಮುಚ್ಚಳ (cap) ಹಾಕಿಸಿಕೊಂಡಿದ್ದರೆ ಅಥವಾ ಉಬ್ಬು ಹಲ್ಲಿಗೆ ಕ್ಲಿಪ್ ಹಾಕಿಸಿಕೊಂಡಿದ್ದರೆ, ಅವರು ಶೆಡ್ಡಿನಲ್ಲಿಯೇ ವಾಸವಿರಬೇಕಾಗುತ್ತಿತ್ತು. ಅಲ್ಲಿ ಕೆಲವರು ಕೃತಕ ಹಲ್ಲುಗಳನ್ನು ಕಳಚಿ ಅಥವಾ ಡೆಂಟಲ್ ಕ್ಲಿಪ್‌ಗಳನ್ನು ಬಿಚ್ಚಿ ಹಾಕಿ ಅಲ್ಲಿನ ಮೇಲ್ವಿಚಾರಕರಿಗೆ ಒಪ್ಪಿಸಿ ಶೆಡ್‌ನಿಂದ ಬಿಡುಗಡೆ ಹೊಂದಿ ಅರಮನೆ ಸೇರಿಕೊಳ್ಳುತ್ತಿದ್ದರು. ಆದರೆ ರೂಟ್ ಕೆನಾಲ್ ಥೆರಪಿ ಮಾಡಿಸಿಕೊಂಡವರು ಹಲ್ಲಿನ ಕ್ಯಾಪನ್ನು ಕಷ್ಟದಲ್ಲಿ ಕಿತ್ತರೂ ಸಹ ಹಲ್ಲಿನ ಬೇರೊಳಗೆ ಕಲ್ಲಿನಂತೆ ಗಟ್ಟಿಯಾಗಿದ್ದ ರಾಸಾಯನಿಕಗಳನ್ನು ಹೊರತೆಗೆಯಲಾಗದೆ ಕಂಗಾಲಾಗುತ್ತಿದ್ದರು. ಕೆಲವು ಹಳೆಯ ಕಾಲದ ಹಿರಿಯರು ತಮ್ಮ ಕಾಲದ ಫ್ಯಾಷನ್ನಿನಂತೆ ಮುಂದಿನ ಬಾಚಿ ಹಲ್ಲುಗಳಿಗೆ ಬಂಗಾರದ ನೀರು ಬಿಡಿಸಿಕೊಂಡಿದ್ದರು. ದಶಕಗಳಿಂದ ದ್ರವಬಂಗಾರವು ಹಲ್ಲಿಗೆ ಅಂಟಿಕೊಂಡಿದ್ದು ಹೇಗೆ ಕಷ್ಟಪಟ್ಟು ಕೆರೆದರೂ ಕಿತ್ತು ಬರುತ್ತಿರಲಿಲ್ಲ. ಜನರು ಉಗುರಲ್ಲಿ ಉಜ್ಜಿ ನೋಡಿದರು. ಗಟ್ಟಿ ಕಲ್ಲುಗಳಲ್ಲಿ ಕುಟ್ಟಿ ನೋಡಿದರು. ಯಾವುದೂ ಪ್ರಯೋಜನಕ್ಕೆ ಬಾರದೆ ತಲೆ ಮೇಲೆ ಕೈ ಹೊತ್ತು ಶೆಡ್ಡಿನಲ್ಲಿಯೇ ಉಳಿದರು.

ದೇವಲೋಕಕ್ಕೆ ಬಂದವರಲ್ಲಿ ಕೆಲವರು ದಂತ ವೈದ್ಯರಿದ್ದರು. ಅವರಿಗೆ ಅಲ್ಲಿಯೂ ತಮ್ಮ ಸೇವೆಯು ವಿಸ್ತರಿಸಿದುದು ಸಂತಸದ ವಿಷಯವಾದರೂ ಬಂಗಾರದ ದ್ರವ ಅಥವಾ ಹಲ್ಲಿನ ಬೇರಿನಲ್ಲಿಯ ರಾಸಾಯನಿಕಗಳನ್ನು ತೆಗೆಯುವ ಮಾರ್ಗ ತಿಳಿಯದೆ ಸೋತು ಹೋದರು. ಅವರಿಗೆ ಬೇಕಾದ ಉಪಕರಣಗಳು, ಔಷಧಗಳು ಅಲ್ಲಿರಲಿಲ್ಲ. ಡೆಂಟಲ್ ಚೇರ್ ಹಾಗಿರಲಿ ಕುಳಿತುಕೊಳ್ಳಲು ತಗಡಿನ ಚೇರ್ ಕೂಡ ಇರಲಿಲ್ಲ. ದಂತ ವೈದ್ಯನಿಗೆ ಬೇಕಾದ ವಿಶೇಷ ಇಕ್ಕಳ ಇರಲಿ ಕಾಲಿಗೆ ಹೊಕ್ಕ ಮುಳ್ಳನ್ನು ತೆಗೆಯಲು ಸರಿಯಾದ ಚಿಮ್ಮಟ ಸಹ ದೇವಲೋಕದಲ್ಲಿ ಇರಲಿಲ್ಲ.

ದೇವಲೋಕಕ್ಕೆ ಬಂದಿದ್ದವರಲ್ಲಿ ನಾನಾ ವಿಧದ ಬೆರಕೆ ದೇಹದವರಿದ್ದರು. ಕಣ್ಣಿನ ಎಡವಟ್ಟಿದ್ದ ಕೆಲವರು ಕಾಂಟ್ಯಾಕ್ಟ್ ಲೆನ್ಸ್‌ಗಳನ್ನು ದೇವಲೋಕದ ಮೇಲ್ವಿಚಾರಕರಿಗೆ ಒಪ್ಪಿಸಿ, ಕಂಡರಿಯದ ಹೊಸ ರಸ್ತೆಗಳಲ್ಲಿ ತಟ್ಟಾಡುತ್ತಾ, ಎಡವುತ್ತಾ ನಡೆದಾಡತೊಡಗಿದರು. ಕಿವುಡು, ಅರೆಕಿವುಡಾದವರು ಹೊಸ ಲೋಕದಲ್ಲಿ ಎಲ್ಲಿ ಯಾವ ದಿಕ್ಕಿನಿಂದ ಯಾವ ಸಂದೇಶ, ಆದೇಶ ಬರುತ್ತವೆಯೋ ಎಂದು ಬಾಯಿ ತೆರೆದುಕೊಂಡು ಮೈಯ್ಯೆಲ್ಲಾ ಕಿವಿಯಾಗಿ ಆಲಿಸುವ ಭಂಗಿಯಲ್ಲಿ ಚಲಿಸತೊಡಗಿದರು. ಅಪಘಾತಗಳಲ್ಲಿ ಕಾಲು ಕಳೆದುಕೊಂಡು ಕೃತಕ ಕಾಲುಗಳನ್ನು ಹಾಕಿಸಿಕೊಂಡವರು ಸುಲಭದಲ್ಲಿ ಕಾಲು ಕಳಚಿಕೊಟ್ಟು ಬಚಾವಾದರೂ ಊರುಗೋಲು, ವಾಕರ್, ಗಾಲಿ ಖುರ್ಚಿ ಮುಂತಾದವು ಯಾವೂ ಇಲ್ಲದೆ ಇದ್ದಲ್ಲೇ ಬಿದ್ದು ಉರುಳಾಡತೊಡಗಿದರು. ಎರಡು ಕಾಲುಗಳನ್ನೂ ಬಿಚ್ಚಿಕೊಟ್ಟವರು ಸಂಪೂರ್ಣ ಅಸಹಾಯಕರಾಗಿ ಹೋದರು. ಕೈಕಾಲಿನ ಮೂಳೆಗಳಿಗೆ ಪಿನ್ ಹಾಕಿಸಿಕೊಂಡವರು, ನಟ್ಟು ಬೋಲ್ಟು ತಿರುವಿಸಿಕೊಂಡವರು ಶೆಡ್ಡಿನಲ್ಲಿಯೇ ಉಳಿದುಹೋದರು.

ಭೂಮಿಯ ಮೇಲೆ ದೇಶಗಳೆಂಬ ಯಾವ ಭೂಪ್ರದೇಶಗಳು ಸೃಷ್ಟಿಯಾಗಿರದಿದ್ದರೂ ದೇವಲೋಕವೇ ಆಶ್ಚರ್ಯಪಡುವಂತೆ ಮನುಷ್ಯ ಎಂಬ ಪ್ರಾಣಿ ಮಾತ್ರ ಇನ್ನೂರು ದೇಶಗಳನ್ನು ಸೃಷ್ಟಿಸಿಕೊಂಡಿದ್ದ. ಈ ಎಲ್ಲ ದೇಶಗಳಿಂದಲೂ ಮೃತರ ಆಗಮನವಾಗುತ್ತಿದ್ದುದರಿಂದ ಯಾವ್ಯಾವುದೋ ಭಾಷೆ, ಬಣ್ಣ, ಗಾತ್ರ, ನಂಬಿಕೆ, ಪೂರ್ವಗ್ರಹಗಳ ಮಿಶ್ರಣವಾಗಿದ್ದ ಆ ಭಾರೀ ಜನಜಂಗುಳಿ ಅಪರಿಚಿತರ, ಒಳ್ಳೆಯವರ, ಕೆಟ್ಟವರ, ಜಾಣರ, ದಡ್ಡರ, ಕುರುಡರ, ಕುಂಟರ, ಕೆಪ್ಪರ, ಹೆಳವರ, ಶಂಕಾಸ್ಪದರ ಮಿಶ್ರಣವಾಗಿತ್ತು. ಮಹಿಳೆಯರ, ಮಕ್ಕಳ ಸ್ಥಿತಿಯೂ ಭಿನ್ನವಾಗಿರಲಿಲ್ಲ. ಅಲ್ಲಿ ಯಾವುದೇ ಖಂಡ, ದೇಶ, ಭಾಷೆ, ಧರ್ಮ, ಜಾತಿ, ಬಣ್ಣ, ವಯಸ್ಸು, ಲಿಂಗ ಮುಂತಾದ ಭೇದವಿಲ್ಲದೇ ಎಲ್ಲರನ್ನೂ ಒಂದೇ ಎಂದು ಪರಿಗಣಿಸಿ ನೋಡಲಾಗುತ್ತಿತ್ತು. ದೇವಲೋಕಕ್ಕೆ ಆಗಮಿಸಿದವರ ಉಡುಪುಗಳು ಸಮವಸ್ತ್ರದಂತೆ ಮತ್ತು ಯಾರೋ ಉಟ್ಟು ಬಿಟ್ಟ ಬಟ್ಟೆಯಂತಿದ್ದವು. ಕಾಲಿಗೆ ಚಪ್ಪಲಿ ಸಹ ಇರಲಿಲ್ಲ. ಭೂಲೋಕದ ಬಿಲಿಯನೇರ್, ಮಲ್ಟಿ ಬಿಲಿಯನೇರ್, ದೇಶ ಖಂಡಗಳ ನಂಬರ್ 1, 2, 3 ಎಂದು ಗುರುತಿಸಲ್ಪಟ್ಟಿದ್ದ ಶ್ರೀಮಂತರೆಲ್ಲಾ ಲಕ್ಷಾಂತರ ಜನರಂತೆ ಉಂಡೋ ಉಪವಾಸವಿದ್ದೋ, ಮಣ್ಣು ಕಲ್ಲಿನ ರಸ್ತೆಗಳ ಮೇಲೆ ಬಯಲಲ್ಲಿ ಧೂಳು